KARN010004892026

| | | |
|---|---|---|
| Presented on | : | 03-03-2026 |
| Registered on | : | 04-03-2026 |
| Decided on | : | 26-03-2026 |
| Duration | : | 21 days |

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

M H ANNAYYANAVAR Digitally signed by M H ANNAYYANAVAR Date: 2026.03.26 17:56:38 +0530

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ 26 ನೇ ಮಾರ್ಚ್ ಮಾಹೆ 2026**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 156/2026**

ಅರ್ಜಿದಾರರು : ಶ್ರೀ ರವಿಕುಮಾರ,
(ಆರೋಪಿ) ಬಿನ್ ಬೋರಯ್ಯ,
ವಯಸ್ಸು 45 ವರ್ಷ.
ವಾಸಃ ಕೆಂಪಾಪುರ ಗ್ರಾಮ, ತಿಪ್ಪಸಂದ್ರ ಹೋಬಳಿ,
ಮಾಗಡಿ ತಾಲ್ಲೂಕು, ಬೆಂಗಳೂರು ದಕ್ಷಿಣ ಜಿಲ್ಲೆ.
(ಪರವಾಗಿ ಶ್ರೀ ರಾಮಸ್ವಾಮಿ, ವಕೀಲರು)

- ವಿರುದ್ಧ -

ಎದುರುದಾರರು: ಸರ್ಕಾರದ ಪರವಾಗಿ ರಾಮನಗರ ಸಿ.ಇ.ಎನ್. ಪೊಲೀಸ್ ಠಾಣೆ,
ಬೆಂಗಳೂರು ದಕ್ಷಿಣ ಜಿಲ್ಲೆ.
(ಪರವಾಗಿ ಸರ್ಕಾರಿ ಅಭಿಯೋಜಕರು)

*****

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಜಾಮೀನು ಅರ್ಜಿಯ ಮೇಲೆ ಆದೇಶ

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿ, ರಾಮನಗರ ಸಿ.ಇ.ಎನ್. ಪೊಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?
2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ**:** |

## <u>ಕಾರಣಗಳು</u>

5. <u>ಅಂಶ ಸಂಖ್ಯೆ **1:**</u> ಪಿರ್ಯಾದುದಾರರು ಕೊಟ್ಟ ದೂರಿನಂತೆ ರಾಮನಗರ ಸಿ.ಇ.ಎನ್. ಪೊಲೀಸ್ ಠಾಣಾಧಿಕಾರಿಗಳು ಅರ್ಜಿದಾರರ ವಿರುದ್ಧ ರಾಮನಗರ ಸಿ.ಇ.ಎನ್. ಪೊಲೀಸ್ ಠಾಣಾ ಅಪರಾಧ ಸಂಖ್ಯೆ 22/2026 ಮಾಹಿತಿ ತಂತ್ರಜ್ಞಾನ ಕಾಯಿದೆ, 2000 ಕಲಂ.66(C), 66(D) ಜೊತೆಗೆ ಭಾರತೀಯ ನ್ಯಾಯ ಸಂಹಿತೆ 2023 ಕಲಂ.318(4)ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

6. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ**:**</u> ದೂರನ್ನು ಪರಿಶೀಲಿಸಲಾಗಿ, ಪಿರ್ಯಾದಿಯು ಬಸವೇಶ್ವರನಗರದಲ್ಲಿರುವ ಕೋಟಕ್ ಮಹೇಂದ್ರ ಬ್ಯಾಂಕ್ ಶಾಖೆಯಲ್ಲಿರುವ ಖಾತೆ ನಂ.7211309120 ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿರುವ ಎಸ್.ಬಿ.ಐ ಬ್ಯಾಂಕನಲ್ಲಿರುವ ಉಳಿತಾಯ ಖಾತೆ ಹೊಂದಿದ್ದು, ಈಗ್ಗೆ 12 ವರ್ಷದ ಹಿಂದೆ ಪಿರ್ಯಾದಿಗೆ

ಪರಿಚಯ ಇರುವ ರಾಜಣ್ಣರವರ ಮುಖಾಂತರ ಅರ್ಜಿದಾರ ಇವರ ಪರಿಚಯವಾಗಿದ್ದು, ಅವರು ನನಗೆ ನೀವು ರೈಸ್ ಪುಲ್ಲಿಂಗ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಸಾವಿರಾರು ಕೋಟಿ ಲಾಭ ಬರುತ್ತದೆಂದು ಪಿರ್ಯಾದಿಗೆ ಸುಳ್ಳನ್ನು ಹೇಳಿ ಕಂಪನಿಗೆ ಹಣವನ್ನು ಕಟ್ಟಬೇಕೆಂದು 12 ವರ್ಷದಿಂದ ಇಲ್ಲಿಯವರೆಗೆ ಪಿರ್ಯಾದಿಯ ಖಾತೆಗಳಿಂದ ಹಾಗೂ ಸ್ನೇಹಿತರುಗಳ ಖಾತೆಗಳಿಂದ ಹಂತ ಹಂತವಾಗಿ ಹಣವನ್ನು ಅರ್ಜಿದಾರ ಮೊಬೈಲ್ ನಂ.9632991700, 7204865669 ಗಳಿಗೆ ಪೋನ್ ಪೇ ಮತ್ತು ಗೂಗಲ್ ಪೇ ಮಾಡಿಸಿಕೊಂಡಿದ್ದು, ನಂತರ ವಿಚಾರಿಸಲಾಗಿ, ಅರ್ಜಿದಾರ ರೈಸ್ ಪುಲ್ಲಿಂಗ್ ಕಂಪನಿಗೆ ಎಂದು ಸುಳ್ಳನ್ನು ಹೇಳಿ ಪಿರ್ಯಾದಿಯನ್ನು ನಂಬಿಸಿ ಅವರಿಂದ ಹಣವನ್ನು ವರ್ಗಾವಣೆ ಮಾಡಿಕೊಂಡಿರುವ ವಿಚಾರ ತಿಳಿದಿದ್ದು, ಪಿರ್ಯಾದಿ 2025 ನೇ ಸಾಲಿನಲ್ಲಿ ಅಂದಾಜು ರೂ.6 ಲಕ್ಷ ಹಣವನ್ನು ವರ್ಗಾವಣೆ ಮಾಡಿದ್ದು, ಈ ಕಾರಣದಿಂದ ಪಿರ್ಯಾದಿ ಅರ್ಜಿದಾರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದರೂ ಸಹಿತ ಜೀವಾವಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ ಮತ್ತು ಮಾನ್ಯ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಂತಹ ಆಪಾದನೆ ಆಗಿರುತ್ತದೆ.

8. ಕೇಸ್ ಡೈರಿ ಪರಿಶೀಲಿಸಲಾಗಿ, 12 ವರ್ಷದಿಂದ ಇಲ್ಲಿಯವರೆಗೆ ನನ್ನ ಖಾತೆಗಳಿಂದ ಹಾಗೂ ಸ್ನೇಹಿತರ ಖಾತೆಗಳಿಂದ ಹಂತ ಹಂತವಾಗಿ ಪೋನ್ ಪೇ ಮತ್ತು ಗೂಗಲ್ ಪೇ

ಮಾಡಿರುತ್ತೇವೆ ಅಂತಾ ಬರೆದಿದ್ದು, ಯಾವ್ಯಾವ ದಿನಾಂಕ ಎಷ್ಟೆಷ್ಟು ಹಣವನ್ನು ಅರ್ಜಿದಾರರ ಖಾತೆಗೆ ಜಮಾ ಮಾಡಲಾಗಿದೆ ಎಂಬುದರ ಬಗ್ಗೆ ಒಂದು ದಾಖಲೆ ಹಾಜರುಪಡಿಸಿರುವುದಿಲ್ಲ. 12 ವರ್ಷದಿಂದ ಅಂದರೆ ಕನಿಷ್ಠ ದೂರು ಕೊಡುವವರೆಗೆ ಒಂದು ವರ್ಷದಲ್ಲಿ ಎಷ್ಟು ಹಣ ಜಮಾ ಮಾಡಲಾಗಿದೆ ಎಂಬುದರ ಬಗ್ಗೆ ದಾಖಲೆ ಹಾಜರುಪಡಿಸದೇ ದೂರಿನಲ್ಲಿ ಹೇಳಿದ ಆಧಾರದ ಮೇಲಿಂದ ಅರ್ಜಿದಾರ ಅಪರಾಧ ಮಾಡಿರುತ್ತಾರೆ ಅಂತಾ ಹಾಗೂ ದೂರನ್ನು 2025 ನೇ ಸಾಲಿನಲ್ಲಿ ಅಂದಾಜು ರೂ.6 ಲಕ್ಷ ಹಣ ಜಮಾ ಮಾಡಿರುತ್ತೇನೆ, ಅದಕ್ಕೆ ಸಂಬಂಧಪಟ್ಟಂತೆ ಸ್ಟೇಟ್ಮೆಂಟ್ ಹಾಜರುಪಡಿಸಿರುತ್ತೇನೆ ಹೇಳಿರುತ್ತಾರೆ ವಿನಃ ದೂರು ಕೊಡುವ ಸಮಯದಲ್ಲಿ ಸ್ಟೇಟ್ಮೆಂಟ್ ಹಾಜರುಪಡಿಸಿದ್ದಲ್ಲಿ ಆ ಆಧಾರದ ಮೇಲೆ ಸದರಿ ಪಿರ್ಯಾದಿಯ ಖಾತೆಯಿಂದ ಅರ್ಜಿದಾರ ಖಾತೆಗೆ ಹಣ ಜಮಾ ಆಗಿದ್ದಲ್ಲಿ ಸದರಿ ಹಣವನ್ನು ವಸೂಲಿ ಮಾಡುವ ಸಲುವಾಗಿ ಅರ್ಜಿದಾರರನ್ನು ಪೊಲೀಸ್ ಅಭಿರಕ್ಷೆಗೆ ಕೊಡಲು ಅವಕಾಶ ಇತ್ತು. ಯಾವುದೇ ಸ್ಟೇಟ್ಮೆಂಟ್ ಹಾಜರುಪಡಿಸದೇ ಇರುವುದರಿಂದ, ಇಂಥ ಸಂದರ್ಭದಲ್ಲಿ ಅರ್ಜಿದಾರರು ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುತ್ತಾರೆ.

9. ಅರ್ಜಿದಾರರು ಬೆಂಗಳೂರು ದಕ್ಷಿಣ ಜಿಲ್ಲಾ ರಹವಾಸಿಯಾಗಿದ್ದು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದು ತಲೆ ಮರೆಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದು ಸೂಕ್ತ ಅಂತ ನ್ಯಾಯಾಲಯಕ್ಕೆ

ಕಂಡುಬಂದಿರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

10. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

<u>ಆದೇಶ</u>

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ಅಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿ ಅರ್ಜಿದಾರನಿಂದ ರೂ.50,000/- (ಐವತ್ತು ಸಾವಿರ ರೂಪಾಯಿ) ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನುದಾರರನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

<u>ಷರತ್ತುಗಳು</u>

1. ಅರ್ಜಿದಾರರು ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
2. ಅರ್ಜಿದಾರರು ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ.
3. ನ್ಯಾಯಾಲಯಕ್ಕೆ ತಪ್ಪದೇ ಎಲ್ಲಾ ವಿಚಾರಣೆ ದಿನಾಂಕ ದಂದು ಹಾಜರಿರತಕ್ಕದ್ದು.

4. ಅರ್ಜಿದಾರರು ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.
5. ಅರ್ಜಿದಾರ ಎದುರುದಾರ ಪೊಲೀಸ್ ಠಾಣೆಯಲ್ಲಿ ಪ್ರತಿ ಸೋಮವಾರ ಮಧ್ಯಾಹ್ನ 2.00 ರಿಂದ 5.00 ಗಂಟೆಯೊಳಗೆ ಎರಡು ತಿಂಗಳು ಹಾಜರಾತಿ ನೀಡತಕ್ಕದ್ದು.
6. ಆದೇಶ ಆದ 15 ದಿವಸದೊಳಗೆ ಅರ್ಜಿದಾರರು ಸಂಬಂಧಪಟ್ಟ ದಂಡಾಧಿಕಾರಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಲು ಆದೇಶಿಸಲಾಗಿದೆ.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ ಜಾಮೀನು ಅರ್ಜಿ ವಜಾ ಆಗತಕ್ಕದ್ದು ಅಂತಾ ಆದೇಶ ಮಾಡಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ III ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **26** ನೇ ಮಾರ್ಚ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

**** ****